

# ಕ್ರೇಪ್ ಮಿರ್ಟಲ್

■ ಹನುಮಂತ ಭಟ್, ಬಿ.

ಹಾಡುವ ಪಕ್ಷಿಗಳ ಆವಾಸವೇ ಆಗಿರುವ ನೇರಳೆ, ಗುಲಾಬಿ, ಬಿಳಿ, ಕೆಂಪು ವರ್ಣ ಮಿಶ್ರಿತ, ಗುಲ್‌ಮೊಹರ್‌ನಂತಹ ಗರಿ ಗರಿಯಾದ ದಳಗಳನ್ನು ಹೊಂದಿದ ಲಿಥ್ರೇಷಿಯೇ (Lythraceae) ಕುಟುಂಬದ ಲಾಜಸ್ಟ್ರೋಮಿಯಾ ಸಂಕುಲದ ಸಸ್ಯವೇ ಕ್ರೇಪ್ ಮಿರ್ಟಲ್ (Crape Myrtle).

ಭಾರತ, ಚೀನಾ, ಕೋರಿಯಾ, ಜಪಾನ್ ಮುಂತಾದೆಡೆಗಳಲ್ಲಿ ಕಾಣಸಿಗುವ ಇದನ್ನು 'ಲಾಜಸ್ಟ್ರೋಮಿಯಾ ಇಂಡಿಕಾ' (Lagesrstroemia Indica) ಎಂಬ ವೈಜ್ಞಾನಿಕ ಹೆಸರಿನಿಂದ ಗುರುತಿಸುತ್ತಾರೆ. ಯಥೇಚ್ಛವಾಗಿ ರೆಂಬೆ ಕೊಂಬೆಗಳಿಂದ ಟಿಸಿಲೊಡೆದು ಅಗಲವಾಗಿ ಪೊದೆಗಳಂತೆ ವ್ಯಾಪಿಸುವ ಬಹುಕಾಂಡದ ಮರವಿದು. 15 ರಿಂದ 30 ಅಡಿ ಎತ್ತರ ಹಾಗೂ ಅಷ್ಟೇ ಅಳತೆಯಲ್ಲಿ ಅಗಲವಾಗಿ ಬೆಳೆದು ವಿಶಾಲವಾಗಿ ಹರಡುತ್ತದೆ. ಅಗಲವಾದ ಮೇಲ್ತುದಿ ಅಥವಾ ಮೊನಚಾದ ತುದಿಯಿಂದ ಕೂಡಿದ ವೃಕ್ಷವು ಉಷ್ಣವಲಯದ ವಾತಾವರಣಕ್ಕೆ ಒಗ್ಗಿದೆ.

ಇದರ ಕಾಂಡವು ಮಿದುವಾದ ಗುಲಾಬಿ ಮಿಶ್ರಿತ ಬೂದು ಮತ್ತು ಕಂದು ಬಣ್ಣದ ತೊಗಟೆಯನ್ನು ಹೊಂದಿದ್ದು ವರ್ಷಕ್ಕೊಮ್ಮೆ ತೊಗಟೆಯನ್ನು ಉದುರಿಸುತ್ತದೆ. ಹಾಗೆಯೇ ಚಳಿಗಾಲದಲ್ಲಿ ತನ್ನ ಎಲೆಗಳನ್ನು ಉದುರಿಸಿ, ವಸಂತದಲ್ಲಿ ಮತ್ತೆ ಚಿಗುರಿಸುತ್ತದೆ. ಚಿಕ್ಕ ಎಲೆಗಳು ವೃತ್ತಾಕಾರ ಇಲ್ಲವೇ ಅಂಡಾಕಾರದಲ್ಲಿದ್ದು ದಟ್ಟ ಹಸಿರು ಬಣ್ಣವನ್ನು ಹೊಂದಿದೆ. ಉದುರುವ ಕಾಲಕ್ಕೆ ಹಳದಿ, ಕೇಸರಿ ಇಲ್ಲವೇ ಕೆಂಪು ಬಣ್ಣಕ್ಕೆ ತಿರುಗುತ್ತದೆ.

ಬೇಸಿಗೆಯ ಆರಂಭದಿಂದ ಶರತ್ಕಾಲದವರೆಗೂ ಸಸ್ಯದಲ್ಲಿ ಹೂಗಳು ಅರಳುತ್ತವೆ. ಬೇರೆ ಬೇರೆ ಮರಗಳಲ್ಲಿ ಬೇರೆ ಬೇರೆ ಬಣ್ಣದ ನೇರಳೆ, ಗುಲಾಬಿ, ಶ್ವೇತ ವರ್ಣದ ಹೂಗಳು ನೋಡುಗರನ್ನು ಆಕರ್ಷಿಸುತ್ತವೆ. ಇದರ ಹೈಬ್ರಿಡ್ ತಳಿಗಳೂ ಈಗ ಮಾರುಕಟ್ಟೆಗೆ ಲಗ್ಗೆ ಇಟ್ಟಿದ್ದು; ಕೈ ತೋಟಗಳ ಅಲಂಕಾರಿಕ ಸಸ್ಯವಾಗಿ ಸಾಕಷ್ಟು ಬೇಡಿಕೆ ಪಡೆದುಕೊಳ್ಳುತ್ತಿದೆ.